> ಇವತ್ತಿಗೂ ಸಾಹಿತ್ಯದವರು ಸ್ತ್ರೀವಾದದ ಬಗ್ಗೆ ಮಾತಾಡುವಷ್ಟು ಉಳಿದ ಜ್ಞಾನವಲಯಗಳು ಮಾತಾಡೋದಿಲ್ಲ. ಇಡೀ ಜ್ಞಾನವ್ಯವಸ್ಥೆಯೇ ಪಿತೃಪ್ರಧಾನವಾಗಿರುವುದರಿಂದ ಎಲ್ಲ ವಲಯಗಳ ಒಳಗಡೆಯೂ ಸ್ತ್ರೀವಿರೋಧಿ ವ್ಯವಸ್ಥೆಗಳಿವೆ. ಹೆಣ್ಣು ಬದುಕಿನ ವಿರುದ್ಧವಾದ ಜ್ಞಾನವಿದೆ.

ಸಾಧಕರಾಗಿ ಪ್ರಸಿದ್ಧರಾದವರ ಸಂದರ್ಶನಗಳನ್ನು ಮಾಡುವಾಗಲೂ ನಿಮಗೆ ಅಡುಗೆ ಮಾಡಕ್ಕೆ ಬರುತ್ತಾ? ಅನ್ನೋ ಪ್ರಶ್ನೆಯನ್ನು ಕೇಳೇ ಕೇಳ್ತಾರೆ. ಸಮಾಜವನ್ನ ಒಪ್ಪಿಸುವಂತಹ ಉತ್ತರವನ್ನೇ ಅವರು ಕೊಡುತ್ತಾರೆ. ಪಿತೃಪ್ರಧಾನ ವ್ಯವಸ್ಥೆಯು ಸೃಷ್ಟಿಸಿರುವ ಈ ತರಹದ ಸುಳ್ಳು ಮಿಥ್‌ಗಳನ್ನು ಹರಡುತ್ತಾ ಹೋಗುತ್ತಿದೆ. ಎಲ್ಲರೂ ಇದನ್ನು ನಂಬುತ್ತಲೇ ಹೋಗುತ್ತಾರೆ.

ಈ ಮಿಥ್‌ಗಳಿಂದ ಹೊರಬರದ ಹೊರತು ಗಂಡು ಹೆಣ್ಣು ಇಬ್ಬರೂ ವಾಸ್ತವವನ್ನು ಕಾಣಲು ಸಾಧ್ಯವಿಲ್ಲ. ಅದಕ್ಕೆ ಸ್ತ್ರೀವಾದಿ ಜ್ಞಾನಮೀಮಾಂಸೆ ಹೇಳೋದು ನಿನಗೆ ಬೇಕಾದ ಜ್ಞಾನವನ್ನು ನೀನು ರೂಪಿಸಿಕೊ ಅಂತ. ಆಗ ಸ್ಥಾಪಿತ ಜ್ಞಾನವಲಯಗಳ ಎಲ್ಲ ಮಿಥ್ಯೆಗಳು ಕಣ್ಮುಂದೆ ನಿಚ್ಚಳವಾಗಿ ಕಾಣುತ್ತವೆ. ಪ್ರಜ್ಞೆಯಲ್ಲಿ ಜಾಗೃತಿಯಾಗದ ಹೊರತು ವಸ್ತುಸ್ಥಿತಿ ಬದಲಾಗವುದಿಲ್ಲ.

◆ **ಸಿಮೊನ್ ದ ಬೊವಾ ಮತ್ತು ಬೆಲ್ ಹುಕ್ಸ್ ಅನುವಾದದ ಅನುಭವಗಳು...**

ಸಿಮೊನ್ ದ ಬೊವಾ ಅಸ್ತಿತ್ವವಾದದ ಮೂಲಪ್ರಶ್ನೆಯಾದ ನಾನ್ಯಾರು ಅನ್ನುವುದಕ್ಕೆ ಉತ್ತರ ಹುಡುಕಲು ಹೊರಟಳು. ಇದಕ್ಕೆ ಎಲ್ಲ ಬಗೆಯ ಜ್ಞಾನಶಿಸ್ತುಗಳನ್ನು ಚಾಲೆಂಜ್ ಮಾಡಿದಳು. ಇದನ್ನು ಅನುವಾದ ಮಾಡುವಾಗ ಬಹಳ ಕಷ್ಟವಾಯಿತು. ಅವಳು ವಿಜ್ಞಾನದ ಬಗ್ಗೆ ಮಾತಾಡ್ತಾಳೆ, ತತ್ತ್ವಶಾಸ್ತ್ರದ ಬಗ್ಗೆಯೂ ಮಾತಾಡ್ತಾಳೆ. ಎಲ್ಲ ಜ್ಞಾನಶಿಸ್ತುಗಳ ಮೂಲಭೂತ ವಿಷಯಗಳನ್ನು ತಿಳಿದುಕೊಳ್ಳುವುದು ಅಷ್ಟು ಸುಲಭವಲ್ಲ. ಹಲವು ಕಡೆ ಕೆ.ವಿ. ನಾರಾಯಣ್ ಅವರೊಂದಿಗಿನ ಚರ್ಚೆ ಅನುವಾದಕ್ಕೆ ಸಹಾಯ ಮಾಡಿತು. ಬಹಳ ಸಂಕೀರ್ಣವಾದಂತಹ ವಿಷಯವನ್ನ ಅನುವಾದ ಮಾಡುವುದು ಸುಲಭವಾಗಿರಲಿಲ್ಲ. ಬೆಲ್‌ಹುಕ್ಸ್ ಅನುವಾದಕ್ಕೆ ಬಂದರೆ ಫೆಮಿನಿಸಂ ಶುರುವಾಗಿ ದಶಕಗಳೇ ಕಳೆದಿತ್ತು. ಅದು ಬೌದ್ಧಿಕವಾಗಿ ಬೆಳೆದಿತ್ತು. ಕಪ್ಪು ಸ್ತ್ರೀವಾದಿಗಳು ಅದರಲ್ಲೂ ಅಮೆರಿಕನ್ ಕಪ್ಪುಸ್ತ್ರೀವಾದಿಗಳ ಬಗ್ಗೆ ನನಗೆ ಆಸಕ್ತಿ ಹುಟ್ಟಿದ್ದು ಯಾಕಂದ್ರೆ ಅವರು ಜನಾಂಗೀಯ ತಾರತಮ್ಯವನ್ನು ಅನುಭವಿಸುತ್ತಿದ್ದ ಸಮುದಾಯದ ಮಹಿಳೆಯರು. ಒಂದು ಕಡೆ ಪಿತೃಪ್ರಧಾನ ವ್ಯವಸ್ಥೆಯ ತಾರತಮ್ಯಗಳ ಜೊತೆಗೆ ಜನಾಂಗೀಯ ತಾರತಮ್ಯವನ್ನು ಅನುಭವಿಸಬೇಕಿತ್ತು. ಈ ತಾರತಮ್ಯವನ್ನು ಎದುರಿಸುವಾಗ ಅವರಿಗೆ ಎದುರಾದ ದ್ವಂದ್ವ ಅವರು ತಮ್ಮ ಜನಾಂಗದ ಗಂಡಸರೊಂದಿಗೆ ನಿಲ್ಲಬೇಕೋ ಅಥವಾ ಸಾಮಾನ್ಯ ಮಹಿಳೆಯರ ಪರ ನಿಲ್ಲಬೇಕೋ ಅಂತ. ಆಗ ಅವರಿಗೆ ತಮ್ಮ ಪರಿಸ್ಥಿತಿಯ ಅರಿವಾಗತೊಡಗಿತು. ನನಗೆ ಇದು ಭಾರತದ ಪರಿಸ್ಥಿತಿಯೊಂದಿಗೆ ಸಾಮ್ಯತೆ ಹೊಂದಿದೆ ಅನ್ನಿಸಿತು. ಅಲ್ಲಿ ಅವರು ಜನಾಂಗೀಯ ಪ್ರಶ್ನೆಗಳನ್ನು ಎದುರಿಸಿದ ಹಾಗೆ ನಾವಿಲ್ಲಿ ಜಾತಿ ಪ್ರಶ್ನೆಗಳನ್ನು ಎದುರಿಸಬೇಕಿದೆ. ಇಲ್ಲಿ ದಲಿತ ಸ್ತ್ರೀವಾದ ಅಂತನ್ನೋ ಮಾತು ಕೇಳಿಬರುತ್ತಿದೆ ಆದರೆ ಇಲ್ಲಿ ಮುಖ್ಯವಾಹಿನಿಯಲ್ಲಿಯೇ ಸ್ತ್ರೀವಾದ ಇನ್ನೂ ಬಲಗೊಂಡಿಲ್ಲ. ಈ ಮುಖ್ಯವಾಹಿನಿಯ ಸ್ತ್ರೀವಾದ ಬೌದ್ಧಿಕವಾಗಿ ಕೂಡ ಪಿತೃಪ್ರಧಾನ ಹಿಡಿತದಿಂದ ಹೊರಬಂದಿಲ್ಲ. ದಲಿತ ಸ್ತ್ರೀವಾದ ಅಂತನ್ನೋವಾಗಲೂ ಅದು ಈ ಹಿಡಿತದಿಂದ ಹೊರಬಂದಿಲ್ಲ ಮತ್ತು ಅದು ದಲಿತ ಪುರುಷರ